ಶ್ರೀ ಜೆ. ಹೆಚ್. ಪಟೀಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

ಅ) ೧೯೮೨–೮೩ ರಿಂದ ಡಿಸೆಂಬರ್ ೧೯೮೫ರವರೆಗೆ ೧೬೬ ಘಟಕಗಳು ಸ್ಥಾಪಿಸಲಾಗಿವೆ.

ಆ) ಹೌದು. ಒಟ್ಟು ಕೆಲಸ ಮಾಡುತ್ತಿರುವ ೪೨೩೪ ಕೆಲಸಗಾರರ ಪೈಕಿ ೩೮೨೯ ಕೆಲಸಗಾರರು ಸ್ಥಳೀಯರಾಗಿದ್ದಾರೆ.

ಇ) ಸ್ಥಳೀಯರಿಗೆ ಉದ್ಯೋಗಾವಕಾಶ ನೀಡುವಂತೆ ಉದ್ದಿಮೆದಾರರಿಗೆ ಸೂಕ್ತ ಆದೇಶಗಳನ್ನು ನೀಡಲಾಗುತ್ತವೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳನ್ನು ಅಮಾನತ್ತಿನಲ್ಲಿರಿಸಲಾಗಿರುವ ಬಗ್ಗೆ

೧೬೫೨. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೨–೮೩ರ ನಂತರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಬೆಂಗಳೂರು ನಗರ ಸಾರಿಗೆ ವ್ಯವಸ್ಥೆಗಳಲ್ಲಿ ವಿವಿಧ ಕಾರಣಗಳಿಂದ ಅಮಾನತ್ತಿನಲ್ಲಿಡಲಾಗಿರುವ ಅಧಿಕಾರಿಗಳು ಹಾಗೂ ನೌಕರರ ಸಂಖ್ಯೆ ಎಷ್ಟು ಹಾಗೂ ಯಾವ ಯಾವ ದರ್ಜೆಯವರು ಎಷ್ಟೆಷ್ಟು ?

ಆ) ಎರಡು ವರ್ಷಕ್ಕಿಂತ ಮೇಲ್ಪಟ್ಟು ಅಮಾನತ್ತಿನಲ್ಲಿರುವ ಪ್ರಕರಣಗಳ ಸಂಖ್ಯೆ ಎಷ್ಟು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ		ಬಿ.ಟಿ.ಎಸ್.
ಅಧಿಕಾರಿಗಳು	೯	—
ನೌಕರರು	೧೮೩೪	೪೮೧
ಯಾವ ಯಾವ ದರ್ಜೆ		
೧) ೧ನೇ ದರ್ಜೆ ಅಧಿಕಾರಿಗಳು	೪	—
೨) ೨ನೇ ದರ್ಜೆ ಅಧಿಕಾರಿಗಳು	೫	—
೩) ನಿರ್ವಾಹಕರು	೧೨೮೫	೩೫೬
೪) ಚಾಲಕರು	೩೬೮	೮೩
೪) ತಾಂತ್ರಿಕ ಸಿಬ್ಬಂದಿ	೮೩	೩೪
೬) ಸಂಚಾರ ಸಿಬ್ಬಂದಿ	೩೨	೨
೭) ಆಡಳಿತ ಸಿಬ್ಬಂದಿ	೫೮	೪
೮) ಭದ್ರತಾ ಸಿಬ್ಬಂದಿ	೮	೨

ಆ) ಒಂದು (ನ್ಯಾಯಾಲಯದಲ್ಲಿ ತೀರ್ಮಾನವಾಗಬೇಕಾಗಿದೆ).